ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583105
VIJAYANAGARA SRI KRISHNADEVARAYA UNIVERSITY
"Jnana Sagara" Campus, Vinayaka Nagara, Contonment, Ballari - 583105
ಕುಲಸಚಿವರು (ಮೌಲ್ಯಮಾಪನ) ದೂರವಾಣಿ : 08392-241011

ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಘಟಿಕೋತ್ಸವ/2022-23/ 472 ದಿನಾಂಕ:30.05.2022

# ಘಟಿಕೋತ್ಸವ ಅಧಿಸೂಚನೆ

**ವಿಷಯ:** ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ **10ನೇ ಘಟಿಕೋತ್ಸವ** ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 30.05.2022

*****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ 10ನೇ ಘಟಿಕೋತ್ಸವವನ್ನು 2022ರ ಅಕ್ಟೋಬರ್/ನವಂಬರ್ ತಿಂಗಳಿನಲ್ಲಿ ನಡೆಸಲು ಯೋಜಿಸಲಾಗಿದೆ. ವಿವಿಧ ವಿಷಯಗಳ ಸ್ನಾತಕ/ಸ್ನಾತಕೋತ್ತರ/ಪಿಹೆಚ್.ಡಿ/ ಡಿಪ್ಲೋಮಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಈ ಘಟಿಕೋತ್ಸವದಲ್ಲಿ ಪದವಿಗಳನ್ನು ಪ್ರದಾನ ಮಾಡಲಾಗುವುದು. ಘಟಿಕೋತ್ಸವದ ನಿಗದಿತ ದಿನಾಂಕ, ಸ್ಥಳ ಹಾಗೂ ವೇಳೆಯನ್ನು ನಂತರ ವಿಶ್ವವಿದ್ಯಾಲಯದ ಸಾಮಾಜಿಕ ಜಾಲತಾಣದಲ್ಲಿ (www.vskub.ac.in) ಪ್ರಕಟಿಸಲಾಗುವುದು.

ವಿವಿಧ ಪದವಿಗಳ ರ್‍ಯಾಂಕ್/ಚಿನ್ನದ ಪದಕ ಹಾಗೂ ಪಿ.ಹೆಚ್‌ಡಿ ಪದವೀಧರಿಗೆ ಮಾತ್ರ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ವೇದಿಕೆಯಲ್ಲಿ ಪ್ರದಾನ ಮಾಡಲಾಗುವುದು. ಇತರೆ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಅನುಪಸ್ಥಿತಿಯಲ್ಲಿ ಪ್ರದಾನಿಸಿ ಮಹಾವಿದ್ಯಾಲಯಗಳ ಮೂಲಕ ನೀಡಲಾಗುವುದು.

ಆದ್ದರಿಂದ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಪ್ರಾರಂಭದಿಂದ ಈವರೆಗಿನ ಅರ್ಹ ಅಭ್ಯರ್ಥಿಗಳು ಘಟಿಕೋತ್ಸವ ಪ್ರಮಾಣ ಪತ್ರ ಪಡೆಯಲು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸೂಕ್ತ ಶುಲ್ಕ ಸಂದಾಯದೊಂದಿಗೆ ಆನ್‌ಲೈನ್ (Online) ಮೂಲಕ ಮಾತ್ರ ಸಲ್ಲಿಸಲು ಕೋರಲಾಗಿದೆ.

ಘಟಿಕೋತ್ಸವ ಅರ್ಜಿಯು ವಿಶ್ವವಿದ್ಯಾಲಯದ ಸಾಮಾಜಿಕ ಜಾಲತಾಣದಲ್ಲಿ ಲಭ್ಯವಿದ್ದು, ವಿದ್ಯಾರ್ಥಿಗಳು ದಿನಾಂಕ: **01.06.2022 ರಿಂದ 25.06.2022 ರ** ಒಳಗಾಗಿ ದಂಡ ರಹಿತವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದುರಿಗಿಸಲಾಗುವುದಿಲ್ಲ.

**ಶುಲ್ಕ ವಿವರ (Fee Description) :**

| (ವಿವರಗಳು) **Description** | ಖುದ್ದಾಗಿ (ರ್‍ಯಾಂಕ್/ಚಿನ್ನದ ಪದಕ ಹಾಗೂ ಎಂ.ಫಿಲ್ ಮತ್ತು ಪಿ.ಹೆಚ್‌ಡಿ ಪದವೀಧರರು) **In person (only Rank holders/ Gold Medal holders/ M.Phil and Ph.D)** | ಅನುಪಸ್ಥಿತಿ (ಇತರ ಎಲ್ಲಾ ಪದವೀಧರರು) **In Absentia (All other graduates)** |
|---|---|---|
| ಎಲ್ಲಾ ಪದವಿಗಳಿಗೆ (ಸ್ನಾತಕ/ಸ್ನಾತಕೋತ್ತರ/ಸ್ನಾತಕ–ಡಿಪ್ಲೋಮ/ ಸ್ನಾತಕೋತ್ತರ ಡಿಪ್ಲೋಮ) For all degrees (UG/PG/UG-Diploma/ PG-Diploma) | Rs. 2,500/- | Rs.2,500/- |
| ಎಲ್ಲಾ ಪದವಿಗಳ ವಿದೇಶಿ ಅಭ್ಯರ್ಥಿಗಳಿಗೆ (ಪಿ.ಹೆಚ್‌ಡಿ ಹೊರತುಪಡಿಸಿ) For Foreign Candidates for all degrees (except Ph.D) | Rs. 10,150/- | Rs. 19,200/- |
| ಪಿ.ಹೆಚ್‌ಡಿ ಪದವೀಧರರಿಗೆ For Ph.D Degree holder | Rs. 3,550/- | -- |

* ನಿಗದಿಪಡಿಸಿದ ಕೊನೆಯ ದಿನಾಂಕದ ನಂತರದ ಹೆಚ್ಚುವರಿ ಶುಲ್ಕ ಪ್ರತಿ ದಿನ ರೂ.200/- ಐದು ದಿನದ ವರೆಗೆ, ಆರನೇ ದಿನದಿಂದ ಹತ್ತನೇ ದಿನಗಳವರೆಗೆ ಪ್ರತಿ ದಿನ ರೂ.500/-, ಹನ್ನೊಂದನೆ ದಿನದಿಂದ ಮೂವತ್ತು ದಿನಗಳವರೆಗೆ ರೂ.7000/, ಮೂವತ್ತು ದಿನಗಳ ನಂತರ ರೂ. 10000/-.

**ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:**

1. ಎಲ್ಲಾ ಸೆಮಿಸ್ಟರ್ ಅಂಕಪಟ್ಟಿಯ (ಎಲ್ಲಾ ಪ್ರಯತ್ನಗಳ) ನಕಲು ಪ್ರತಿಗಳು.
2. ಪ್ರಾವಿಜನಲ್ ಪಾಸಿಂಗ್ ಸರ್ಟಿಫಿಕೇಟ್ ನಕಲು ಪ್ರತಿ.
3. ಪಾಸ್‌ಪೋರ್ಟ್ ಅಳತೆಯ ಮೂರು ಭಾವಚಿತ್ರ.
4. ಆಧಾರ್ ಕಾರ್ಡ್ ನಕಲು ಪ್ರತಿ.
5. ಪಿಹೆಚ್.ಡಿ ಅಧಿಸೂಚನೆ ಪತ್ರ ನಕಲು (ಪಿಹೆಚ್.ಡಿ ಯವರಿಗೆ ಮಾತ್ರ).

**ಕುಲಸಚಿವರು (ಮೌಲ್ಯಮಾಪನ)**
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

**Copy to:**

1. The Secretary, University Grants Commission, Bahadur Shah Zafar Marg, New Delhi-110 002.
2. The Secretary to Governor, Raj Bhavan, Bangalore – 560 001.
3. The Principal Secretary, Department of Higher Education (Universities), Government of Karnataka, 6th Floor, M.S.Building, Dr.Ambedkar Veedhi, Bangalore- 560 001.
4. The Registrars of all Indian Universities including Indian Institute of Science, Bangalore and Deemed Universities.
5. The Secretary, Association of Indian Universities, AIU House, 16th Kotla Road, New Delhi.
6. The Registrar, VSK University, Ballari.
7. The Finance Officer, VSK University, Ballari.
8. All the Chairman, P.G. Department, VSK University, Ballari.
9. The Librarian, VSK University, Ballari.
10. All the Principals of Affiliated Colleges, VSK University, Ballari.
11. The Director, College Development council, VSK University, Ballari.
12. The Director, Physical Education, VSK University, Ballari.
13. The Director, P.G.Centre, Nandihalli, Sandur.
14. The Director, P.G Centre, Koppal.
15. The Director, P.G Centre, Yalaburga.
16. The Assistant Executive Engineer, Engineering Section, VSK University, Ballari.
17. All the Deputy Registrars/ Assistant Registrars, VSK University, Ballari.
18. The Co-ordinator, NSS, VSK University, Ballari.
19. The Co-ordinator, ICT Cell, VSK University, Ballari.
20. The Manager, Canara Bank, VSKU Branch, Vinayaka Nagar, Ballari.
21. PS to Vice-Chancellor/ PS to Registrar. VSK University, Ballari.
22. Notice Board.
23. Office copy.